ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE :

## ಕಾಂಗ್ರೆಸ್‌ನ ಓರ್ವ ಶಾಸಕ ರಾಜೀನಾಮೆ

ಭೋಪಾಲ್: ಮಧ್ಯಪ್ರದೇಶದಲ್ಲಿ ಮಂಗಳವಾರ ರಾತ್ರಿ ಆರಂಭವಾದ ಹೈಡ್ರಾಮಾ ಮುಂದುವರಿದಿದ್ದು, ಬಂಡೆದ್ದಿರುವ ಶಾಸಕರ ಪೈಕಿ ಒಬ್ಬರು ಗುರುವಾರ ಸಂಜೆ ರಾಜೀನಾಮೆ ನೀಡಿದ್ದಾರೆ. ಈ ಮಧ್ಯೆ, ನಾಲ್ವರು ಶಾಸಕರು ನಾಪತ್ತೆಯಾಗಿದ್ದಾರೆ. ಇವರಲ್ಲೇ ಒಬ್ಬರಾದ ಹರ್ದೀಪ್ ಸಿಂಗ್ ಡ್ಯಾಂಗ್ ರಾಜೀನಾಮೆ ಪತ್ರವನ್ನು ಸಭಾಪತಿ ಎನ್.ಪಿ. ಪ್ರಜಾಪತಿಗೆ ಕಳುಹಿಸಿದ್ದಾರೆ. ಈ ಬೆಳವಣಿಗೆಯಿಂದ ಸಿಎಂ ಕಮಲ್‌ನಾಥ್‌ರ ಸರ್ಕಾರ ಅಲ್ಪಮತಕ್ಕೆ ಕುಸಿಯುವ ಆತಂಕ ಹೆಚ್ಚಾಗಿದೆ. ಎರಡನೇ ಬಾರಿ ಶಾಸಕನಾಗಿದ್ದರೂ ನನ್ನನ್ನು ಪಕ್ಷ ನಿರಂತರವಾಗಿ ಕಡೆಗಣಿಸುತ್ತಿದೆ. ಭ್ರಷ್ಟ ಸರ್ಕಾರದ ಭಾಗವಾಗಿರುವ ಕಾರಣ ಯಾವುದೇ ಸಚಿವರು ಕೆಲಸ ಮಾಡಲು ಸಿದ್ಧರಿಲ್ಲ ಎಂದು ಮಂದಸೌರ್ ಕ್ಷೇತ್ರವನ್ನು ಪ್ರತಿನಿಧಿಸುವ ಹರ್ದೀಪ್ ಸಿಂಗ್ ಡ್ಯಾಂಗ್ ಆರೋಪಿಸಿದ್ದಾರೆ. ನಾಪತ್ತೆಯಾಗಿರುವ ಇತರ ಮೂವರು ಶಾಸಕರಾದ ರಘುರಾಜ್ ಕನ್ಸಾನ, ಬಿಸಾಹುಲಾಲ್ ಹಾಗೂ ಶೇರಾ ಭಯ್ಯಾ ಕರ್ನಾಟಕದಲ್ಲಿ ಇದ್ದಾರೆ ಎನ್ನಲಾಗಿದೆ. ಗುರುಗ್ರಾಮದ ಪಂಚತಾರಾ ಹೋಟೆಲ್‌ನಿಂದ ದೆಹಲಿಗೆ ಕರೆತರಲಾಗಿದ್ದ ಮೂವರು ಕಾಂಗ್ರೆಸ್, ಇಬ್ಬರು ಬಿಎಸ್‌ಪಿ ಹಾಗೂ ಓರ್ವ ಎಸ್‌ಪಿ ಶಾಸಕರು ಈಗ ಭೋಪಾಲ್‌ಗೆ ಮರಳಿದ್ದಾರೆ. ತಾವು ಕಾಣೆಯಾಗಿದ್ದರಲ್ಲಿ ಬಿಜೆಪಿಯ ಕೈವಾಡ ಇಲ್ಲ ಎಂದೂ ಹೇಳಿದ್ದಾರೆ.

» ಮಧ್ಯಪ್ರದೇಶದ ನಾಲ್ವರು ಕೈ ಶಾಸಕರು ನಾಪತ್ತೆ

» ಕಮಲ್ ಸರ್ಕಾರಕ್ಕೆ ಹೆಚ್ಚಿದ ಆತಂಕ